	ಒಂದು ವರ್ಷದ ತರಬೇತಿ
೫	ಪರಿಶಿಷ್ಟ ವರ್ಗದ ಆಶ್ರಮಶಾಲೆ / ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ – ಕೇಂದ್ರ ಪುರಸ್ಕೃತ ಯೋಜನೆಯಡಿ ಪರಿಶಿಷ್ಟ ವರ್ಗದ ಆಶ್ರಮಶಾಲೆ / ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ಕೇಂದ್ರ ಸರ್ಕಾರವು ಶೇ ೫೦ ರಷ್ಟು ಅನುದಾನವನ್ನು ಮಂಜೂರು ಮಾಡುತ್ತದೆ
೬	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ – ಮೆಟ್ರಿಕ್ ನಂತರದ ಕೋಸಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರ ವಿದ್ಯಾರ್ಥಿವೇತನ ನೀಡಲಾಗುತ್ತಿದೆ
೭	ತರಬೇತಿ ಮತ್ತು ಸಂಬಂದಿತ ಯೋಜನೆ – ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ವಿಶೇಷ ತರಬೇತಿ ಕಾರ್ಯಕ್ರಮ
೮	ಗಿರಿಜನ ಸಂಶೋಧನಾ ಸಂಸ್ಥೆ ಸ್ಥಾಪನೆ – ಕೇಂದ್ರ ಪುರಸ್ಕೃತ ಯೋಜನೆಯಡಿ ಗಿರಿಜನ ಸಂಶೋಧನಾ ಸಂಸ್ಥೆ ಸ್ಥಾಪನೆಗೆ ಅನುದಾನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೦೦ (೨೧೨೮)

ಸದಸ್ಯರ ಹೆಸರು ಶ್ರೀ ಶಿವಶಂಕರರೆಡ್ಡಿ ಎನ್ ಹೆಚ್ (ಗೌರಿಬಿದನೂರು)

ಉತ್ತರಿಸುವ ಸಚಿವರು ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕ್ಯಾನ್ಸರ್, ಕಿಡ್ನಿ ತೊಂದರೆ, ನರಗಳ ದೌರ್ಬಲ್ಯ, ಹೃದಯ ರೋಗ ಇತರೆ	ಕ್ಯಾನ್ಸರ್, ಕಿಡ್ನಿ ತೊಂದರೆ, ನರಗಳ ದೌರ್ಬಲ್ಯ ಹೃದಯ ರೋಗಗಳಿಂದ ಪೀಡಿತರಾಗಿರುವ

	ರೋಗಗಳಿಂದ ಬಳಲುತ್ತಿರುವ ಬಡ ರೋಗಿಗಳ ಚಿಕಿತ್ಸೆಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳಾವುವು (ವಿರ ಒದಗಿಸುವುದು),	ಬಡ ರೋಗಿಗಳಿಗೆ ಈ ಕೆಳಕಂಡ ಚಿಕಿತ್ಸೆಗಳನ್ನು ಬೆಂಗಳೂರಿನಲ್ಲಿ ಉಚಿತವಾಗಿ ನೀಡಲಾಗುತ್ತದೆ ೧ ಕ್ಯಾನ್ಸರ್ ರೋಗಿಗಳಿಗೆ, ಕಿದ್ವಾಯಿ ಆಸ್ಪತ್ರೆಯಲ್ಲಿ ೨ ಕಿಡ್ನಿ ತೊಂದರೆಗಳಿಗೆ ನೆಫ್ರೋಯೂರಿಯಾಲಜಿ ವಿಭಾಗದಲ್ಲಿ ೩ ನರಗಳ ದೌರ್ಬಲ್ಯಕ್ಕೆ ನಿಮ್ಹಾನ್ಸ್ ನಲ್ಲಿ ೪ ಹೃದಯ ರೋಗ ಚಿಕಿತ್ಸೆಗೆ ಜಯದೇವ ಹೃದಯ ಸಂಸ್ಥೆಯಲ್ಲಿ
ಆ)	ಈ ರೋಗಿಗಳ ಚಿಕಿತ್ಸೆಗೆ ಸರ್ಕಾರವು ನೀಡುವ ಧನ ಸಹಾಯ, ರಿಯಾಯಿತಿ ಸೌಲಭ್ಯಗಳೇನು (ವಿವರ ಒದಗಿಸುವುದು) ,	ಜಯದೇವ ಹೃದಯರೋಗ ಸಂಸ್ಥೆಯಲ್ಲಿ ಬಿ ಪಿ ಎಲ್ ಕಾರ್ಡ್‌ದಾರರಿಗೆ ಉಚಿತ ಸೇವೆ ನೀಡಲಾಗುತ್ತದೆ
ಇ)	ಈ ಬಡರೋಗಿಗಳ ಚಿಕಿತ್ಸೆಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸಹಾಯ ನೀಡಲು ಸರ್ಕಾರವು ಕೈಗೊಳ್ಳುವ ಕ್ರಮವೇನು ,	ಬಡರೋಗಿಗಳ ಹೃದಯ ಶಸ್ತ್ರ ಚಿಕಿತ್ಸೆಗೂ ಸಹ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಪಡೆದು ಉಚಿ ವೈದ್ಯಕೀಯ ಸೌಲಭ್ಯಗಳನ್ನು ನೀಡಲಾಗುತ್ತದೆ
ಈ)	ಹಾಗಿದ್ದಲ್ಲಿ, ನೊಂದ ರೋಗಿಗಳು ಖಾಯಿಲೆಯಿಂದ ವಿಮುಕ್ತರಾಗಿ, ಸಂತಸದಿಂದಿರಲು ಸರ್ಕಾರವು ರೂಪಿಸಿರುವ ಕಾರ್ಯಕ್ರಮಗಳೇನು?	ಇದೂ ಅಲ್ಲದೆ ವೈದ್ಯಾಧಿಕಾರಿಗಳ ಫಂಡ್ ಹಾಗೂ ಸ್ವಯಂಸಂಸ್ಥೆಗಳು ನೀಡಿರುವ ಪರಿಹಾರ ನಿಧಿಗಳಿಂದ ಬಡರೋಗಿಗಳ ಚಿಕಿತ್ಸಾ ವೆಚ್ಚವನ್ನು ಭರಿಸುತ್ತಾ ಸೇವೆಯನ್ನು ಕಲ್ಪಿಸಲಾಗಿದೆ